

# ಆನೆ ಮರಿಗಳ ‘ವಲಪ್ರ್ಪು ತಾಯಿ’!

■ ಪ್ರವೀಣ ಕುಲಕರ್ಣಿ

‘ಆಸ್ಕರ್ ಪ್ರಶಸ್ತಿ ಅಂದರೆ ಏನು ಅಂತಾ ನನಗೆ ತಿಳಿದಿಲ್ಲ’.

ಜಗತ್ತಿನ ಪ್ರತಿಷ್ಠಿತ ಪ್ರಶಸ್ತಿ ಎನಿಸಿದ ‘ಆಸ್ಕರ್’ ಗೆದ್ದ ‘ಎಲಿಫೆಂಟ್ ವಿಸ್ಪರರ್ಸ್’ ಸಾಕ್ಷ್ಯಚಿತ್ರದ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿರುವ ಬೆಳ್ಳಿ ಅವರು ಹೇಳುವ ಮುಗ್ಧವಾದ ಮಾತಿದು. ಅವರಿಗೆ ಗೊತ್ತಿರುವುದು ಒಂದೇ ಲೋಕ. ಅದು ಕಾಡಿನೊಳಗಿನ ಆನೆಗಳ ಜಗತ್ತು ಅಷ್ಟೆ. ಬೆಳ್ಳಿ ಮತ್ತು ಅವರ ಪತಿ ಬೊಮ್ಮನ್ ಅವರಿಗೆ ಮೂರೂ ಹೊತ್ತು ಒಂದೇ ಧ್ಯಾನ. ಅದೇ, ಆನೆ ಮರಿಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎನ್ನುವುದು. ಆ ಧ್ಯಾನದಲ್ಲಿ ಅವರು ಎಷ್ಟೊಂದು ಮುಳುಗಿದ್ದಾರೆ ಎಂದರೆ, ಆನೆಮರಿಗಳ ಪಾಲಿಗೆ ಅವರು ಅಕ್ಷರಶಃ ತಾಯಿ–ತಂದೆಯೇ ಆಗಿಬಿಟ್ಟಿದ್ದಾರೆ.

‘ಆನೆ ಮರಿಗಳು ನಮ್ಮ ಮಕ್ಕಳಿದ್ದಂತೆ. ಮಕ್ಕಳನ್ನು ನೋಡಿಕೊಳ್ಳುವಂತೆಯೇ, ಅಮ್ಮನಿಂದ ದೂರವಾದ ಆನೆ ಮರಿಗಳನ್ನೂ ಸೇವಾಭಾವದಿಂದ ಪೋಷಿಸಿದ್ದೇವೆ. ನಮ್ಮ ಮಾವುತ ಪರಂಪರೆಯಲ್ಲಿ ಇಂತಹ ಪ್ರೀತಿಯೇ ಬದುಕು’ ಎನ್ನುವ ಬೆಳ್ಳಿ, ಮಾನವೀಯತೆಯ ಬೆಳ್ಳಿಕಿರಣದಂತೆ ಹೊಳೆಯುತ್ತಾರೆ.

ನಮ್ಮ ಬಂಡೀಪುರಕ್ಕೆ ಹೊಂದಿಕೊಂಡಿರುವ ಮುದುಮಲೈನ ತೆಪ್ಪಕಾಡು ಸಾಕಾನೆ ಶಿಬಿರದ ಬಿಡಾರದಲ್ಲಿ ಇವರ ವಾಸ. ಸಾಕ್ಷ್ಯಚಿತ್ರದ ಮುಖ್ಯ ಭೂಮಿಕೆಯಲ್ಲಿ ಬೆಳ್ಳಿ ಅವರು ಪತಿ ಬೊಮ್ಮನ್ ಅವರೊಟ್ಟಿಗೆ ಕಾಣಿಸಿಕೊಂಡಿದ್ದಾರೆ. ‘ಆನೆಮರಿಗಳ ಪಾಲಿಗೆ ನಾನು ವಲಪ್ರ್ಪು ತಾಯಿ (ಸಾಕುತಾಯಿ)’ ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ. ‘ಪ್ರಶಸ್ತಿ ಕುರಿತು ನನಗೆ ಖಂಡಿತಾ ಏನೂ ಗೊತ್ತಿಲ್ಲ. ಆದರೆ, ಎಲ್ಲರೂ ಬಂದು ಅಭಿನಂದಿಸುವುದನ್ನು ನೋಡಿ ಖುಷಿ ಆಗುತ್ತಿದೆ. ನಮ್ಮ ಮುಖ್ಯಮಂತ್ರಿ ಬೇರೆ ಕರೆದು ಸನ್ಮಾನ ಮಾಡಿದ್ದಾರೆ’ ಎಂದು ಅದೇ ಮುಗ್ಧತೆಯಲ್ಲಿ ವಿವರಿಸುತ್ತಾರೆ.

ಅತ್ತ ಅಮೆರಿಕದಲ್ಲಿ ಆಸ್ಕರ್ ಪ್ರಶಸ್ತಿ ಘೋಷಣೆ ಆಗುವಾಗ ಇತ್ತ ಮುದುಮಲೈ ಕಾಡಿನಲ್ಲಿ ಬೊಮ್ಮನ್, ಅಪಾಯದಲ್ಲಿ ಸಿಲುಕಿದ್ದ ಮತ್ತೊಂದು ಆನೆಯೊಂದನ್ನು ರಕ್ಷಿಸಲು ತೆರಳಿದ್ದರು. ‘ಎಲಿಫೆಂಟ್ ವಿಸ್ಪರರ್ಸ್’ನ ರೀಲ್ ಮತ್ತು ರಿಯಲ್ ಹೀರೊ ಅವರು. ಕುಟ್ಟುನಾಯಕ ಸಮುದಾಯದ ಬೊಮ್ಮನ್ ಅವರು, ವರ್ಷಗಳ ಹಿಂದೆ ತಾಯಿಯಿಂದ ದೂರವಾದ ಪುಟ್ಟ ಆನೆಮರಿಯನ್ನು ಸಂರಕ್ಷಿಸಿ, ಶಿಬಿರಕ್ಕೆ ಕರೆತಂದು ಪತ್ನಿಯೊಂದಿಗೆ ಅದನ್ನು ಆರೈಕೆ ಮಾಡಿದ ಕಥೆಯೇ ಈ ಸಾಕ್ಷ್ಯಚಿತ್ರವಾಗಿದೆ.

ಆ ಆನೆಮರಿಯು, ತಾಯಿ ವಿದ್ಯುದಾಘಾತದಿಂದ ಮೃತಪಟ್ಟಿದ್ದರಿಂದ ಅಸಹಾಯಕ ಸ್ಥಿತಿಯಲ್ಲಿ ಬಿದ್ದಿತ್ತು. ನಾಯಿಗಳ ದಾಳಿಗೂ ಒಳಗಾಗಿತ್ತು. ತುಂಬಾ ಗಂಭೀರವಾಗಿ ಗಾಯಗೊಂಡು ಬಂದಿದ್ದ ಆ ಮರಿಗೆ ಬೊಮ್ಮನ್–ಬೆಳ್ಳಿ ದಂಪತಿ, ‘ರಘು’ ಎಂದು ಹೆಸರಿಟ್ಟರು. ಅದರ ಮೈತೊಳೆದರು, ಹಲ್ಲುಜ್ಜಿದರು, ಹಾಲು ಕುಡಿಸಿದರು, ಕೈತುತ್ತು ತಿನ್ನಿಸಿದರು. ಅಕ್ಷರಶಃ ಹೆತ್ತ ಕಂದಮ್ಮನನ್ನು ಆರೈಕೆ ಮಾಡುವಂತೆಯೇ ಅದನ್ನು ನೋಡಿಕೊಂಡರು. ‘ರಘು’ ಈ ಕುಟುಂಬದ ಸದಸ್ಯನೇ ಆಗಿಹೋದ. ಮುಂದೆ ‘ಅಮ್ಮು’ ಎಂಬ ಮತ್ತೊಂದು ಆನೆಮರಿಯೂ ಈ ಕುಟುಂಬದ ಸದಸ್ಯನಾಗಿ ಸೇರಿಕೊಂಡಿತು. ಬೆಳೆದ ‘ರಘು’ವನ್ನು ಬೇರೆ ಶಿಬಿರಕ್ಕೆ ಕಳಿಸಿಕೊಡುವಾಗ ಬೆಳ್ಳಿ–ಬೊಮ್ಮನ್ ಕಣ್ಣೀರು ಸುರಿಸಿದರೆ, ‘ಅಮ್ಮು’ ತನ್ನ ಸೊಂಡಿಲಿನಿಂದ ಆ ಕಣ್ಣೀರನ್ನು ಒರೆಸುತ್ತಿತ್ತು!

ಆನೆಮರಿಗಳು ಮತ್ತು ಬೊಮ್ಮನ್ ದಂಪತಿಯ ಪ್ರೀತಿಯ ಕಥೆಯನ್ನು ಕಟ್ಟಿಕೊಡುವ ಮುನ್ನ ನಿರ್ದೇಶಕಿ ಕಾರ್ತಿಕಿ ಗೊನ್ಸಾಲ್ವೆಸ್ ಈ ಶಿಬಿರದಲ್ಲಿ ಹಲವು ದಿನಗಳವರೆಗೆ ತಂಗಿದ್ದಾರೆ. ಆನೆಮರಿ ಮತ್ತು ಬೊಮ್ಮನ್ ದಂಪತಿಯ ಸಂಬಂಧದ ಎಳೆ ಎಳೆಯನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ಆದ್ದರಿಂದಲೇ ಸಾಕ್ಷ್ಯಚಿತ್ರ ಅಷ್ಟೊಂದು ಗಟ್ಟಿಯಾಗಿ ಮೂಡಿಬರಲು ಸಾಧ್ಯವಾಗಿದೆ. ತಲೆಮಾರುಗಳಿಂದ ಮಾವುತ ವೃತ್ತಿಯಲ್ಲಿರುವ ಕುಟ್ಟುನಾಯಕ ಸಮುದಾಯದ ಸಂಸ್ಕೃತಿ, ಬದುಕು, ಆಚರಣೆ, ಆನೆಗಳ ಜೊತೆಗಿನ ಅವರ ಅವಿನಾಭಾವ ಸಂಬಂಧವನ್ನೂ ಚಿತ್ರ ತೆರೆದಿಡುತ್ತದೆ. ಕಾರ್ತಿಕಿ ಅವರ ಶ್ರಮ ಚಿತ್ರದಲ್ಲಿ ಎದ್ದು ಕಾಣುತ್ತದೆ. ಕಾಡಿನ ಬದುಕನ್ನು ಅಲ್ಲಿನ ಹಸುರಿನೊಂದಿಗೆ ಗಟ್ಟಿಯಾಗಿ ಕಟ್ಟಿಕೊಟ್ಟಿದೆ ‘ಎಲಿಫೆಂಟ್ ವಿಸ್ಪರರ್ಸ್’.

ಅಂದಹಾಗೆ, ಬೆಳ್ಳಿ–ಬೊಮ್ಮನ್ ಅವರದೂ ಒಂದು ಅಪರೂಪದ ಪ್ರೇಮಕಥೆ. ಬೆಳ್ಳಿಯ ಮೊದಲ ಪತಿಯನ್ನು ಹುಲಿಯೊಂದು ಹೊತ್ತೊಯ್ದಾಗ ಬೆಳ್ಳಿಯ ಜತೆಯಾದವರು ಬೊಮ್ಮನ್. ಈ ದಂಪತಿಯ ಮಗಳು ಬೆಂಕಿ ತಗುಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗಲೂ ಆನೆ ಬಿಟ್ಟುಹೋಗಲು ಹಿಂಜರಿದವರು ಬೆಳ್ಳಿ. ಆನೆಯ ಪ್ರತಿ ಹಾವಭಾವದಲ್ಲೂ ಅದರ ಮನಸ್ಸನ್ನು ಅಳೆಯಬಲ್ಲವರು ಈ ತಾಯಿ. ತಮಗೆ ಆದ ಹಸಿವನ್ನೂ ಅವರು ಮರೆತಾರು. ಆದರೆ, ತಮ್ಮ ಆನೆ ಮಕ್ಕಳ ಹೊಟ್ಟೆಯನ್ನು ಎಂದಿಗೂ ಹಸಿಯಲು ಬಿಟ್ಟವರಲ್ಲ. ಅಲ್ಲವೆ ಮತ್ತೆ, ಈ ‘ವಲಪ್ರ್ಪು ತಾಯಿ’ಯ ನಡೆ ನಮಗೆಲ್ಲರಿಗೂ ಮಾದರಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65